**ಮುಲ್ಕಿಯಲ್ಲಿ ಉಪನೋಂದಣಾಧಿಕಾರಿ ಕಟ್ಟಡದ ದುರಸ್ತಿ**

2233 - ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಮುಲ್ಕಿಯಲ್ಲಿ ಉಪನೋಂದಣಾಧಿಕಾರಿಯವರ ಕಛೇರಿ ಕಟ್ಟಡ ಕುಸಿಯುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಟ್ಟಡವನ್ನು ದುರಸ್ತಿ ಮಾಡಲಾಗುವುದೇ ಅಥವಾ ಬದಲಿ ಕಟ್ಟಡ ಕಟ್ಟಲಾಗುವುದೇ?

ಇ) ಹೊಸ ಕಟ್ಟಡ ಕಟ್ಟಲು ಅದಕ್ಕೆ ತಗಲುವ ಅಂದಾಜು ಹಣ ಎಷ್ಟು?

ಈ) ಈ ಕಟ್ಟಡವನ್ನು ಎಂದು ಕಟ್ಟಲಾಗುವುದು?

ಉ) ಈ ಕಟ್ಟಡದ ಅವ್ಯವಸ್ಥೆಯಿಂದ ಜನರಿಗಾದ ತೊಂದರೆ ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಬಂದಿದೆ

ಆ) ಹೊಸ ಕಟ್ಟಡ ಕಟ್ಟುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಲಾಗುವುದು.

ಈ) ಕಟ್ಟಡಕ್ಕೆ ಬೇಕಾದ ಹಣವನ್ನು ಒದಗಿಸಿದ ನಂತರ ಆದಷ್ಟು ಬೇಗನೆ ಕಟ್ಟಲಾಗುವುದು

ಉ) ಸಧ್ಯಕ್ಕೆ ಕಛೇರಿಯನ್ನು ಖಾಸಗಿ ಕಟ್ಟಡಕ್ಕೆ ಸ್ಥಲಾಂತರಿಸಲಾಗಿದೆ.

**ಕೃಷಿ ಇಲಾಖೆಯ ವಾಹನಗಳ ಸಂಖ್ಯೆ**

2431 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದ ಕೃಷಿ ಇಲಾಖೆಯಲ್ಲಿ ಹಾಲಿ ಇರುವ ವಾಹನಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಈಗ ಚಾಲ್ತಿಯಲ್ಲಿರುವ ಹಾಗೂ ದುರಸ್ತಿಯಲ್ಲಿರುವ ವಾಹನಗಳ ಸಂಖ್ಯೆ ಎಷ್ಟು?

ಇ) ಇವುಗಳ ಪೈಕಿ ದಕ್ಷಿಣ ಕನ್ನಡದಲ್ಲಿ ಇರುವ ವಾಹನಗಳ ಸಂಖ್ಯೆ ಎಷ್ಟು?

ಈ) ದುರಸ್ತಿಯಲ್ಲಿರುವ ವಾಹನಗಳನ್ನು ಹರಾಜು ಮಾಡಲಾಗುವುದೇ ಅಥವಾ ದುರಸ್ತಿ ಮಾಡಿ ಇಟ್ಟುಕೊಳ್ಳಲಾಗುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) 552

ಆ) ಚಾಲ್ತಿಯಲ್ಲಿರುವ 505 ಹಾಗೂ ದುರಸ್ತಿಯಲ್ಲಿರುವ 47 ವಾಹನಗಳಿವೆ.

ಇ) 15

ಈ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಶಿಫಾರಸ್ಸಿನನ್ವಯ ದುರಸ್ತಿಯಲ್ಲಿರುವ ವಾಹನಗಳನ್ನು ದುರಸ್ತಿ ಮಾಡಿ ಇಟ್ಟುಕೊಳ್ಳಲಾಗುವುದು ಅಥವಾ ಬಹಿರಂಗ ಹರಾಜಿನಲ್ಲಿ ವಿಲೇಮಾಡಲಾಗುವುದು.